ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ. ಪ್ರಶ್ನೋತ್ತರ ವೇಳೆಯಲ್ಲಿ ಎಲ್ಲಾ ಪ್ರಶ್ನೆಗಳನ್ನು ಮುಗಿಸಲೇ ಬೇಕು.

ತಾಂತ್ರಿಕ ಶಾಲೆಗಳಲ್ಲಿ ಹೊಸದಾಗಿ ಒಂದು ವ್ಯಾಸಂಗ ವಿಭಾಗವನ್ನು ಪ್ರಾರಂಭಿಸುವ ಬಗ್ಗೆ

೧೧೬ (೫೫೭) ಶ್ರೀ ಐ. ಬಿ. ಶಂಕರ್ (ಚಿಕ್ಕಮಗಳೂರು).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ತಾಂತ್ರಿಕ ಶಾಲೆಗಳಲ್ಲಿ ಹೊಸದಾಗಿ ಒಂದು ವ್ಯಾಸಂಗ ವಿಭಾಗವನ್ನು ಪ್ರಾರಂಭಿಸಲು ೫ ಲಕ್ಷ ರೂಪಾಯಿಗಳನ್ನು ಠೇವಣಿ ಇಡಬೇಕೆಂದು ಆದೇಶಿಸಿರುವುದು ವೈದ್ಯಕೀಯ ಹಾಗೂ ಇತರ ಇಂಜಿನಿಯರಿಂಗ್ ಕಾಲೇಜುಗಳಿಗೆ ಅನ್ವಯವಾಗುವುದೆ ?

ಆ) ಆರ್ಥಿಕವಾಗಿ ಹಿಂದುಳಿದಿರುವವರಿಗೆ ಹಾಗೂ ಗ್ರಾಮಾಂತರ ಪ್ರದೇಶಗಳಿಗೆ ತಾಂತ್ರಿಕ ವಿದ್ಯಾಭ್ಯಾಸವನ್ನು ಕೊಂಡೊಯ್ಯುವ ಧ್ಯೇಯಕ್ಕೆ ಇದು ಅಡ್ಡಿಯಾಗುವುದಿಲ್ಲವೆ, ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮವೇನು ?

ಶ್ರೀ ಡಿ. ಮಂಜುನಾಥ್ (ವಿದ್ಯಾ ಸಚಿವರು).—

ಅ) ೫ ಲಕ್ಷ ರೂ. ಗಳನ್ನು ಠೇವಣಿ ಇಡಬೇಕೆಂದು ಆದೇಶ ನೀಡಿರುವುದು ಕೇವಲ ಖಾಸಗಿ ಪಾಲಿಟೆಕ್ನಿಕ್‌ಗಳ ಆಡಳಿತ ಸಂಸ್ಥೆಯವರಿಗೆ ಮಾತ್ರ.

ಆ) ಕಳೆದ ನಾಲ್ಕು ವರ್ಷಗಳಲ್ಲಿ ೧೫೦ ಪಾಲಿಟೆಕ್ನಿಕ್‌ಗಳಿಗೆ ಮಂಜೂರಾತಿ ನೀಡಿದ್ದು ಇವುಗಳು ೯೬ ಗ್ರಾಮಾಂತರ ಪ್ರದೇಶದಲ್ಲಿದ್ದು ಅಲ್ಲಿನ ಮಕ್ಕಳಿಗೆ ತಾಂತ್ರಿಕ ಶಿಕ್ಷಣ ಸೌಲಭ್ಯ ದೊರೆತಿದೆ. ಹೊಸ ನೀತಿಯಿಂದ ಯಾವುದೇ ವರ್ಗದ ವಿದ್ಯಾರ್ಥಿಗಳಿಗೆ ತೊಂದರೆ ಆಗುವುದಿಲ್ಲ.

ಶ್ರೀ ಐ. ಬಿ. ಶಂಕರ್.—ಈ ಪಾಲಿಟೆಕ್ನಿಕ್ ಮತ್ತು ಐ.ಟಿ.ಐ. ಶಾಲೆಗಳು ಗ್ರಾಮಾಂತರದ ಬಡ ವ್ಯಕ್ತಿಗಳಿಗೆ ಸಂಬಂಧಪಟ್ಟಿರುವುದರಿಂದ, ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜಿಗೆ ಕೊಟ್ಟಂತೆ ಇಲ್ಲಿಯೂ ೫ ಲಕ್ಷ ರೂಪಾಯಿ ಕೊಡಬೇಕೆಂದರೆ ಶೋಷಣೆ ಪ್ರಾರಂಭವಾಗುತ್ತದೆ. ಪ್ರತಿಯೊಂದು ವಿದ್ಯಾರ್ಥಿಗಳಿಂದಲೂ ೧೫–೨೦ ಸಾವಿರ ರೂಪಾಯಿ ಕೇಳಬೇಕಾಗುತ್ತದೆ. ಇದರಿಂದ ಬಡವರಿಗೆ ತೊಂದರೆಯಾಗುವುದಿಲ್ಲವೇ ?

ಶ್ರೀ ಡಿ. ಮಂಜುನಾಥ್.—ಸರಿಯಾದ ವ್ಯವಸ್ಥಿತ ರೀತಿಯಲ್ಲಿ ನಡೆಸಬೇಕೆಂದು ಸರ್ಕಾರದ ಇಚ್ಛೆಯಾಗಿದೆ. ಕೆಲವೊಂದು ಪಾಲಿಟೆಕ್ನಿಕ್‌ಗಳಲ್ಲಿ ಸರಿಯಾದ ರೀತಿ ಎಕ್ವಿಪ್‌ಮೆಂಟ್ಸ್ ಇಲ್ಲದೇ ಇರುವುದು ಕಂಡುಬಂದಿದೆ. ಈ ವಿಚಾರವನ್ನು ಸಂಪುಟ ಸಭೆಯ ಮುಂದಿಟ್ಟು ಚರ್ಚೆ ಮಾಡಿ ತೀರ್ಮಾನ ತೆಗೆದುಕೊಂಡಿದ್ದೇವೆ.

ಶ್ರೀ ಐ. ಬಿ. ಶಂಕರ್.—ಉತ್ತಮವಾದ ಶಾಲೆಗಳಿದ್ದರೆ ಮಾತ್ರ ಅಂತಹವರಿಗೆ ಅವಕಾಶ ಮಾಡಿ ಕೊಡಿ. ಬಡ ಮಕ್ಕಳಿಗೆ ೫ ಸಾವಿರ ರೂಪಾಯಿ ಪ್ರಕಾರ ಕೇಳಿದರೆ ಬಡವರಿಗೆ ಇದರಿಂದ ತೊಂದರೆಯಾಗುವುದಿಲ್ಲವೇ ? ಸರಿಯಾದ ಎಕ್ವಿಪ್‌ಮೆಂಟ್ ಇಟ್ಟುಕೊಳ್ಳದೇ ಇದ್ದರೆ ಅಂತಹವರಿಗೆ ಅವಕಾಶ ಬೇಡ. ಇದರ ಬಗ್ಗೆ ಕೂಡಲೇ ಮಾನ್ಯ ಮಂತ್ರಿಗಳು ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ಮಂಜುನಾಥ್.—ಪರಿಶೀಲನೆ ಮಾಡುತ್ತೇನೆ.

ಡಿಗ್ರಿ ಕಾಲೇಜುಗಳಲ್ಲಿ ರೀಡರ್ ಹುದ್ದೆಗಳನ್ನು ತುಂಬದೇ ಇರುವ ಬಗ್ಗೆ

೧೧೮ (೫೬೨) ಶ್ರೀ ಮಹಮ್ಮದ್ ಲೈಕೂದ್ದೀನ್ (ಬೀದರ್).—ಮಾನ್ಯ ವಿದ್ಯಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಸರ್ಕಾರದ ಡಿಗ್ರಿ ಕಾಲೇಜುಗಳಲ್ಲಿ ಸುಮಾರು ಎರಡು ವರ್ಷಗಳಿಂದ ಅನೇಕ ವಿಷಯ ಗಳಲ್ಲಿ ಸುಮಾರು ೫೦ ರೀಡರ್ ಹುದ್ದೆಗಳನ್ನು ತುಂಬದೆ ಇರುವುದು ನಿಜವೇ ?

ಆ) ಹಾಗಿದ್ದರೆ, ಕಾರಣಗಳೇನು, ಮತ್ತು ಈ ಹುದ್ದೆಗಳನ್ನು ಯಾವಾಗ ತುಂಬಲಾಗು ವುದು ?

ಇ) ಕಾಲೇಜು ಶಿಕ್ಷಣ ನಿರ್ದೇಶಕರು ಉಪನ್ಯಾಸಕರ ಹುದ್ದೆಗಳಿಗೆ ಕರಾರು ಆಧಾರದ ಮೇಲೆ ಅರ್ಜಿಗಳನ್ನು ಕರೆದಾಗ ದಿನಾಂಕ ೨೦-೬-೮೬ರ ಅಧಿಸೂಚನೆಯಲ್ಲಿ ಉರ್ದು ಉಪನ್ಯಾಸಕರ ಹುದ್ದೆಗಳನ್ನು ಸೇರಿಸದೆ ಇರುವುದು ನಿಜವೇ, ಸೇರಿಸದೆ ಇರಲು ಕಾರಣ ?

ಈ) ಯಾವಾಗ ಉರ್ದು ಉಪನ್ಯಾಸಕರ ಹುದ್ದೆಗಳ ಅಧಿಸೂಚನೆಯನ್ನು ಹೊರಡಿಸಲಾಗುವುದು ಮತ್ತು ಹುದ್ದೆಗಳನ್ನು ತುಂಬಲಾಗುವುದು ?

ಶ್ರೀ ಡಿ. ಮಂಜುನಾಥ್ (ವಿದ್ಯಾ ಸಚಿವರು).—

ಅ) ಹೌದು.

ಆ) ಬಡ್ತಿಯಿಂದ ತುಂಬಬೇಕಾದ ಹುದ್ದೆಗಳ ವಿಷಯ ಈಗಾಗಲೇ ಸರ್ಕಾರದ ಪರಿಶೀಲನೆಯಲ್ಲಿದೆ. ನೇರ ನೇಮಕಾತಿ ಹುದ್ದೆಗಳನ್ನು ವಿಷಯವಾರು ವಿಾಸಲಾತಿ ಆನ್ವಯಿಸಿ (ಸಬ್ಜೆಕ್ಟ್‌ವೈಸ್) ತುಂಬ ಬೇಕೆ ಅಥವಾ ಈಗ ಚಾಲ್ತಿಯಲ್ಲಿರುವಂತೆ ಸಾಮಾನ್ಯ ವರ್ಗಮೆಂದು ಪರಿಗಣಿಸಿ ವಿಾಸಲಾತಿ ಆನ್ವಯಿಸಿ ತುಂಬಬೇಕೆ ? ಎಂಬ ವಿಷಯ ಸುಪ್ರೀಂ ಕೋರ್ಟಿನ ಮುಂದಿದೆ. ನ್ಯಾಯಾಲಯದ ಆದೇಶ ತಲುಪಿದ ನಂತರ ಕ್ರಮ ತೆಗೆದುಕೊಳ್ಳಲಾಗುವುದು.

ಇ) ಉರ್ದು ವಿಷಯದಲ್ಲಿ ಖಾಲಿಹುದ್ದೆಗಳು ಇಲ್ಲದ್ದರಿಂದ ಅರ್ಜಿಗಳನ್ನು ಕರೆಯಲಿಲ್ಲ.

ಈ) ಉರ್ದು ವಿಷಯದಲ್ಲಿ ಹೆಚ್ಚಿಗೆ ಬೋಧನ ಕೆಲಸ (work-load) ವಿದ್ದರೆ ಎಲ್ಲಿ ಅಗತ್ಯವೋ ಅಲ್ಲಿ ಅಂಶಕಾಲಿಕ ಉಪನ್ಯಾಸಕರನ್ನು ನೇಮಕ ಮಾಡಿ ಕಾರ್ಯನಿರ್ವಹಿಸಲಾಗುತ್ತಿದೆ.

SRI MOHAMMED LAIQUDDIN BURANUDDIN.—The Hon'ble Minister in his reply has stated that there are 50 vacancies of Readers for the last two years in various Colleges at various Universities in our State and the reasons given for their non-appointment are not convincing. This shows the total negligence of the Government towards the students who are studying in various colleges. First of all, the post of these Lecturers ought to have been filled up by way of promotion and there are certain ratios to fill up these posts by way of promotion. The Hon'ble Minister has not given any reasons as to why these posts have not been filled up by promotions. Merely saying that the matter is under consideration is not sufficient. The Hon'ble Minister has stated that the direct appointment of the Lecturers is pending on account of the cases pending before the Supreme Court of India which is also not convincing since the question of direct appointment of Lecturers post on reservation basis...

MR. SPEAKER.—Please put direct question.

SRI MOHAMMED LAIQUDDIN BURANUDDIN.—He has furnished the reasons that whether the direct recruitment vacancies are to be filled up by applying reservations on subjectwise basis or applying reservation on common category is before the Supreme Court. But there is a third category by way of reservations in promotions. He has to explain why he has not appointed by way of reservations in promotions. Secondly as regards the appointment of Urdu Lecturers at various college levels, the Hon'ble Minister has stated that there are no vacant posts of Urdu Lecturers. But there are only two posts filled up for

Bidar, Gulbarga and Raichur districts. This is the position in other parts of the State also. These vacancies are kept vacant for a long time.

MR. SPEAKER.—You are giving a lecture. Please put your direct question.

SRI MOHAMMED LAIQUDDIN BURANUDDIN.—Let the Minister first explain as to why he has not filled up the posts of Readers by way of Promotion.

ಶ್ರೀ ಡಿ. ಮಂಜುನಾಥ್.—ಅಧ್ಯಕ್ಷರೇ ನಾನು ಈಗಾಗಲೇ ಇದರ ಬಗ್ಗೆ ನನ್ನ ಉತ್ತರದಲ್ಲಿ ಹೇಳಿದ್ದೇನೆ. ೫೦ ರೀಡರ್ ಹುದ್ದೆಗಳು ಖಾಲಿ ಇವೆ, ಅವುಗಳಿಗೆ ಬಡ್ತಿ ಕೊಟ್ಟು ತುಂಬುವುದಕ್ಕೆ ನಾವು ಈಗಾಗಲೇ ಪರಿಶೀಲನೆ ಮಾಡುತ್ತಿದ್ದೇವೆ. ಆದಷ್ಟು ಜಾಗ್ರತೆ ಮಾಡುತ್ತೇವೆ. ನೇರ ನೇಮಕಾತಿ ಮಾಡುವ ವಿಚಾರದ ಬಗ್ಗೆ ಒಂದು ವಿಷಯವನ್ನು ಮಾನ್ಯ ಸದಸ್ಯರ ಗಮನಕ್ಕೆ ತರಲಿಕ್ಕೆ ಇಷ್ಟಪಡುತ್ತೇನೆ. ಈ ವಿಚಾರದಲ್ಲಿ ಸಬ್ಜುಕ್ಟ್‌ವೈಸ್ ರಿಸರ್ವೇಷನ್ ಮಾಡಬೇಕೇ, ಹೇಗೆ ಮಾಡಬೇಕೆಂದು ಪ್ರಶ್ನೆ ಸುಪ್ರೀಂ ಕೋರ್ಟಿನ ಮುಂದೆ ಇರುವುದರಿಂದ ಅದು ಇಷ್ಟರಲ್ಲೇ ತೀರ್ಮಾನ ಆಗುತ್ತದೆ. ಆನಂತರ ಪಬ್ಲಿಕ್ ಸರ್ವೀಸ್ ಕಮಿಷನ್‌ಗೆ ಬರೆದು ತೀರ್ಮಾನ ಮಾಡುತ್ತೇವೆ. ಇನ್ನು ಗುಲ್ಬರ್ಗ ಮತ್ತು ಬೇರೆ ಕಾಲೇಜುಗಳಲ್ಲಿ ಉರ್ದು ಲೆಕ್ಚರರ್ಸ್ ಇಲ್ಲ ಎಂದು ಹೇಳಿದ್ದೀರಿ. ಉರ್ದು ವಿಷಯದಲ್ಲಿ ಖಾಲಿ ಹುದ್ದೆಗಳು ಇಲ್ಲದೇ ಇದ್ದುದರಿಂದ ಆರ್ಡರ್‌ಗಳನ್ನು ಕರೆಯುಲಿಲ್ಲ. ಖಾಲಿ ಇದ್ದರೆ, ಅತಿ ಜಾಗ್ರತೆಯಾಗಿ ಉರ್ದು ಲೆಕ್ಚರರ್ಸ್ ಅಲ್ಲಿ ಹಾಕಲಿಕ್ಕೆ ಏರ್ಪಾಡು ಮಾಡುತ್ತೇವೆ.

SRI MOHAMMED LAIQUDDIN BURANUDDIN.—There are number of vacancies of Urdu Lecturers in various colleges which are vacant for the last five years. These posts should be filled up atleast on the basis of contract or on part-time basis.

ಶ್ರೀ ಡಿ. ಮಂಜುನಾಥ್.—ಉರ್ದು ಲೆಕ್ಚರರ್ ಪೋಸ್ಟ್ ಖಾಲಿ ಇದ್ದರೆ ಕಾಂಟ್ರಾಕ್ಟ್ ಬೇಸಿಸ್ ಮೇಲೆ ಅಲ್ಲಿಗೆ ಹಾಕಿಸುತ್ತೇನೆ.

ಬಳ್ಳಾರಿ ನಗರದಲ್ಲಿ ಪ್ರಾಥಮಿಕ ಶಾಲಾ ಕಟ್ಟಡಗಳು ಹಾಗೂ ತರಗತಿ ಕೊಠಡಿಗಳ ನಿರ್ಮಾಣದ ಬಗ್ಗೆ

೧೧೯ (೪೯೦) ಶ್ರೀ ಎಂ. ರಾಮಪ್ಪ (ಬಳ್ಳಾರಿ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಬಳ್ಳಾರಿ ನಗರದಲ್ಲಿ ೧೯೮೫ರಿಂದ ಈವರೆಗೂ ಸರ್ಕಾರಿ ಪ್ರಾಥಮಿಕ ಶಾಲಾ ಕಟ್ಟಡಗಳು ಹಾಗೂ ತರಗತಿ ಕೊಠಡಿಗಳ ನಿರ್ಮಾಣಕ್ಕಾಗಿ ಖರ್ಚು ಮಾಡಲಾದ ಹಣ ಎಷ್ಟು? (ಸರಿಯಾದ ವಿವರಗಳನ್ನು ಒದಗಿಸುವುದು)

ಆ) ಬಳ್ಳಾರಿ ನಗರದಲ್ಲಿ ಸರ್ಕಾರಿ ಪ್ರಾಥಮಿಕ ಶಾಲಾ ಕಟ್ಟಡಗಳ ಅಭಾವವಿರುವುದು ಸರ್ಕಾರದ ದವರ ಗಮನಕ್ಕೆ ಬಂದಿದೆಯೇ ಹಾಗೂ ಎಷ್ಟು ಶಾಲೆಗಳಲ್ಲಿ ಸದರಿ ನಗರದಲ್ಲಿ ಸರದಿ ಕ್ರಮದಲ್ಲಿ ನಡೆಸಲಾಗುತ್ತಿದೆ?

ಇ) ಸದರಿ ನಗರದಲ್ಲಿ ಈ ಸಾಲಿನಲ್ಲಿ ಪ್ರಾಥಮಿಕ ಶಾಲಾ ಕಟ್ಟಡದ ನಿರ್ಮಾಣಕ್ಕೆ ಎಷ್ಟು ಹಣ ಒದಗಿಸಲಾಗಿದೆ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

ಅ) ೧,೫೨,೬೫೦-೦೦ ರೂ.ಗಳು.

ಆ) ಬಂದಿದೆ. ಎಂಟು ಶಾಲೆಗಳಲ್ಲಿ.